# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾವೇರಿ, -581110

## OFFICE OF THE DEPUTY COMMISSIONER, HAVERI, 581110

ದೂರವಾಣಿ : 08375-249044,249024
Téléphone: (Fax) 08375-249088/19

Email: deo.haveri@gmail.com


ನಂ :ಡಿಸಿಎಚ್‌ಎವಿ/16016/248/2018 ದಿನಾಂಕ : 28-02-2019

**ಅಧಿಸೂಚನೆ**

**ವಿಷಯ**:- ಹಾವೇರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ**:-
1. ಸರ್ಕಾರದ ಅಧಿಸೂಚನೆ ಸಂ : ಆರ್‌ಡಿ/299/ಬಿಎಸ್‌ಸಿ/2006 ದಿ : 3-2-2009 ಮತ್ತು 24-7-2009.
2. ಸರ್ಕಾರದ ಪತ್ರ ಸಂ:ಕಂಇ/04/ಬಿಎಸ್‌ಸಿ/2011,ದಿ:25-2-2011.
3. ಸರ್ಕಾರದ ಪತ್ರ ಸಂ:ಆರ್‌ಡಿ/33/ಡಿಎಸ್‌ಪಿ/2012 ದಿ:5-6-12 ಹಾಗೂ 21-6-2012.
4. ಸರ್ಕಾರದ ಸುತ್ತೋಲೆ ಸಂ:ಕಂಇ/100/ಪಿಎಸ್‌ಸಿ/2011, ದಿನಾಂಕ: 29-6-2012.
5. ಸರ್ಕಾರದ ಆದೇಶ ಸಂ:ಸಿಆಸುಇ/143/2015 ದಿ:8-1-2016.
6. ಈ ಕಾರ್ಯಾಲಯದ ಅಧಿಸೂಚನೆ ಸಮಸಂಖ್ಯೆ ದಿ:15-2-19

*****

ಹಾವೇರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ 20 ಗ್ರಾಮಲೆಕ್ಕಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿಯ ಕುರಿತು ಉಲ್ಲೇಖ(6)ರ ದಿ:15-2-2019ರ ಕೆಳಗೆ ಅಭ್ಯರ್ಥಿಗಳ ಪರಿಶೀಲನಾ ಪಟ್ಟಿಯನ್ನು ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಿ ಪ್ರಕಟಿಸಲಾಗಿದ್ದು, ನಿಗದಿತ ಅವಧಿಯೊಳಗೆ ಸ್ವೀಕೃತಿಯಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಜರುಗಿಸಿ, ಅರ್ಹತೆ ಆಧಾರದ ಮೇಲೆ ವರ್ಗವಾರು ಒಳ ಮೀಸಲಾತಿ ಕಲ್ಪಿಸಿ, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ದಿನಾಂಕ : 15-2-2019 ರಂದು ಪ್ರಕಟಿಸಲಾದ ಪರಿಶೀಲನಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ತಮ್ಮ ಮೂಲ/ಧೃಡೀಕೃತ ದಾಖಲೆಗಳನ್ನು ಹಾಜರಪಡಿಸಲು ದಿ: 25-2-2019 ರಂದು ಪರಿಶೀಲನಾ ದಿನಾಂಕ ನಿಗದಿಪಡಿಸಿ, ತಿಳುವಳಿಕೆ ಜಾರಿ ಮಾಡಲಾಗಿದ್ದು, ಅದರಂತೆ ಹಾಜರಾದ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸಿ, ತಾತ್ಕಾಲಿಕ ಆಯ್ಕೆ ಪಟ್ಟಿ(ಅನುಭಂಧ-I) ಅರ್ಹತಾ ಪಟ್ಟಿ (ಅನುಭಂದ- II) ಹಾಗೂ ತಿರಸ್ಕೃತ ಪಟ್ಟಿ(III)ಯನ್ನು ಪ್ರಕಟಿಸಲಾಗಿದೆ.

ಸದರ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳೇನಾದರು ಇದ್ದಲ್ಲಿ ದಿ:5-3-2019 ರೊಳಗಾಗಿ (ಕಾರ್ಯಾಲಯದ ವೇಳೆಯಲ್ಲಿ) ಲಿಖಿತವಾಗಿ ಸೂಕ್ತ ದಾಖಲೆಗಳೊಂದಿಗೆ ಈ ಕಛೇರಿಗೆ ಸಲ್ಲಿಸುವುದು. ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವದಿಲ್ಲ.

ಮುಂದುವರೆದಿದೆ 2.. .

ಇದು ತಾತ್ಕಾಲಿಕ ಆಯ್ಕೆ ಪಟ್ಟಿಯಾಗಿದ್ದು, ನೇಮಕಾತಿಯ ಅಂತಿಮ ತೀರ್ಮಾನವು ಆಯ್ಕೆ ಪ್ರಾಧಿಕಾರಕ್ಕೆ ಒಳಪಟ್ಟಿರುತ್ತದೆ. ಗ್ರಾಮಲೆಕ್ಕಾಧಿಕಾರಿಗಳ ನೇರ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಹಾವೇರಿ ಜಿಲ್ಲೆಯ ಇಲಾಖಾ ವೆಬ್ ಸೈಟ್ http://haveri-va.kar.nic.in ನಲ್ಲಿ ಅಭ್ಯರ್ಥಿಗಳ ಗಮನಕ್ಕೆ ಪ್ರಕಟಿಸಲಾಗಿದೆ.

ಅಧ್ಯಕ್ಷರು,
ಆಯ್ಕೆ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿಗಳು, ಹಾವೇರಿ.

**ಪ್ರತಿ ಗೌರವಪೂರ್ವಕ ಸಲ್ಲಿಸಿದೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳುಲ ಕಂದಾಯ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
2. ರಾಜ್ಯ ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರವರ ಕಛೇರಿ, ಬೆಂಗಳೂರು.
3. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ.

**ಪ್ರತಿ ಅಭಿನಂದನೆಗಳೊಂದಿಗೆ ಸೂಕ್ತ ಕ್ರಮಕ್ಕಾಗಿ:**

1. ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ ಸರ್ಕಾರಿ ಹೊರವಲಯ ಮುದ್ರಣಾಲಯ, 8ನೇ ಮೈಲಿ, ಮೈಸೂರು ರಸ್ತೆ, ಆರ್.ವ್ಹಿ.ಕಾಲೇಜ ಪೋಸ್ಟ್, ಬೆಂಗಳೂರು-58 ಇವರಿಗೆ, ಈ ಅಧಿಸೂಚನೆಯನ್ನು ಹಾಗೂ ಇದರ ಲಗ್ತ ಇದ್ದ ಅರ್ಜಿ ನಮೂನೆಯನ್ನು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವ ಹಾಗೂ ಪ್ರಕಟಿತ ಅಧಿಸೂಚನೆಯ ಪ್ರತಿಗಳನ್ನು ಈ ಕಛೇರಿಗೆ ಕಳಿಸಲು ಕೋರಿದೆ.
2. ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಅಭಿನಂದನೆಗಳೊಂದಿಗೆ ಸೂಚನಾ ಫಲಕಕ್ಕೆ ಪ್ರಕಟಿಸುವ ಕುರಿತು ಕೋರಿದೆ.
3. ಉಪ ವಿಭಾಗಾಧಿಕಾರಿಗಳು, ಹಾವೇರಿ/ ಸವಣೂರ ಇವರಿಗೆ, ಕಛೇರಿ ಸೂಚನಾ ಫಲಕಕ್ಕೆ ಪ್ರಕಟಿಸಿ ವರದಿ ಸಲ್ಲಿಸುವುದು.
4. ಜಿಲ್ಲಾ ಸಮಾಜಕಲ್ಯಾಣ ಅಧಿಕಾರಿಗಳು, ಹಾವೇರಿ.
5. ಜಿಲ್ಲಾ ಉದ್ಯೋಗಾಧಿಕಾರಿಗಳು, ಉದ್ಯೋಗ ವಿನಿಮಯ ಕೇಂದ್ರ, ಹಾವೇರಿ.
6. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು, ಹಾವೇರಿ ಇವರಿಗೆ ಕಳಿಸುತ್ತಾ, ಮೇಲ್ಕಂಡ ಅಧಿಸೂಚನೆಯನ್ನು ನಿಗಧಿತ ದಿನಾಂಕದೊಳಗಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಕನ್ನಡ ದಿನಪತ್ರಿಕೆಗಳಲ್ಲಿ ಸುದ್ದಿರೂಪದಲ್ಲಿ ಮುಕ್ಕಟೆಯಾಗಿ ಪ್ರಕಟಣೆ ಕ್ರಮ ಜರುಗಿಸಲು ಕೋರಿದೆ.
7. ಜಿಲ್ಲೆಯ ಎಲ್ಲ ತಹಶೀಲ್ದಾರರಿಗೆ, ಕಛೇರಿಯ ಸೂಚನಾ ಫಲಕಕ್ಕೆ ಪ್ರಕಟಿಸಿ, ಪ್ರಕಟಿಸಿದ ಬಗ್ಗೆ ವರದಿ ಸಲ್ಲಿಸಲು ಸೂಚಿಸಿದೆ.
8. ಕಛೇರಿಯ ಸೂಚನಾ ಫಲಕಕ್ಕೆ .
9. ಕಡತಕ್ಕೆ.

ಕಾರ್ಯದರ್ಶಿಗಳು
ಆಯ್ಕೆ ಪ್ರಾಧಿಕಾರ ಹಾಗೂ
ಅಪರ ಜಿಲ್ಲಾಧಿಕಾರಿಗಳು, ಹಾವೇರಿ.